ಸ್ನೇಹಿತ ಶಾಮರಾವ್ ಕದಮ್ ಹತ್ತಿರವೇ ಬಾಂಬ್ ಸಿಡಿದು ಸತ್ತು ಹೋಗಿದ್ದ. ಅವನ ಮೃತಶರೀರವನ್ನು ನಾನೇ ಹೊತ್ತು ತಂದಿದ್ದೆ. ಆ ಸಂದರ್ಭದಲ್ಲಿ ನಾನು ಒಂದು ಸಣ್ಣಕತೆ ಬರೆದೆ. ಮೊದಲು ಯಾವುದೇ ಸಾಹಿತ್ಯ ಕೃತಿಯನ್ನು ಓದದೇ ಇದ್ದ ಹಿನ್ನೆಲೆಯಲ್ಲಿ ನಾನು ಅದನ್ನು ಬರೆದೆ. ನನ್ನ ಭವಿಷ್ಯದ ಬರವಣಿಗೆಯ ಬೀಜ ಅದರಲ್ಲಿ ಇತ್ತೆಂದು ನನಗೆ ಅನಿಸುತ್ತದೆ. ಆಮೇಲೆ 1972ರಲ್ಲಿ ಪುಣೆಯಲ್ಲಿ ಇರುವಾಗ ಒಂದು ಮರಾಠಿ ಕತೆ ಬರೆದೆ. ಅದು ಸ್ಪರ್ಧೆಯಲ್ಲಿ ಬಹುಮಾನ ಪಡೆದು 'ನವಯುಗ' ಪತ್ರಿಕೆಯ ದೀಪಾವಳಿ ಸಂಚಿಕೆಯಲ್ಲಿ ಪ್ರಕಟವಾಯಿತು. ಎಂಟನೆಯ ತರಗತಿಯವರೆಗೆ ನಾನು ಶಿಕ್ಷಣ ಪಡೆದದ್ದು ಕನ್ನಡ ಮಾಧ್ಯಮದಲ್ಲಿ. ಆಮೇಲೆ ಮರಾಠಿ ಮಾತನಾಡುವ ಸೈನಿಕರ ಜೊತೆ ಇರುತ್ತಿದ್ದೆ. ಪುಣೆಯಲ್ಲಿ ನೆಲೆಸಿದ್ದರಿಂದ ಮರಾಠಿ ಓದುತ್ತಿದ್ದೆ, ಮರಾಠಿಯಲ್ಲಿ ಬರೆಯುತ್ತಿದ್ದೆ. ಆ ಕಾಲದಲ್ಲಿ ನನ್ನ ಕತೆಗಳು ವಿವಿಧ ಮರಾಠಿ ಪತ್ರಿಕೆಗಳಲ್ಲಿ ಪ್ರಕಟವಾಗಿದ್ದವು.

ಆದರೆ ಆಗ ಪ್ರಶ್ನೆಯೊಂದು ನನ್ನನ್ನು ಸದಾಕಾಲ ಕಾಡುತ್ತಿತ್ತು. ನನ್ನ ಮಾತೃಭಾಷೆ ಯಾವುದು, ನನ್ನ ಮನೆಯಲ್ಲಿ, ಊರಿನಲ್ಲಿ ಎಲ್ಲರೂ ಕೊಂಕಣಿಯಲ್ಲಿ ಮಾತನಾಡುತ್ತಾರೆ, ಆದರೆ ಅದನ್ನು ಸ್ವತಂತ್ರ ಭಾಷೆಯೆಂದು ಪರಿಗಣಿಸಲು ಯಾರೂ ಸಿದ್ಧರಿರಲಿಲ್ಲ. ಆಗಾ ಯೋಗಾಯೋಗವೆನ್ನುವ ಹಾಗೆ ಸರಕಾರಿ ಉದ್ಯೋಗದಿಂದಾಗಿ ನಾನು 1978ರಲ್ಲಿ ಗೋವೆಯ ಮೊಜಾರ್ಡ ಊರನ್ನು ಸೇರಿದೆ. ಆ ಊರಿನಲ್ಲಿ ಕೊಂಕಣಿಯ ಹಿರಿಯ ಲೇಖಕ ದಾಮೋದರ ಮಾವಜೋ ಇದ್ದರು. ಅವರ ಮೂಲಕ ಆಗ ಗೋವೆಯಲ್ಲಿ ನಡೆಯುತ್ತಿದ್ದ ಕೊಂಕಣಿ ಚಳವಳಿಯ ಪರಿಚಯವಾಯಿತು. ಆಗ ಅವರು ಬಹಳ ಕಾಳಜಿಯಿಂದ ಪ್ರಾಮಾಣಿಕವಾಗಿ ಕೊಂಕಣಿ ಕೆಲಸ ನಡೆಸುತ್ತಿದ್ದರು. ನಾನು ಅದರಲ್ಲಿ ಸೇರಿಕೊಂಡೆ. ಮುಂದಿನ ಹದಿನೈದು ವರ್ಷ ನಾನು ಸುಮಾರು 150 ಕತೆಗಳನ್ನು ಬರೆದೆ. ಆಮೇಲೆ ನಾನು ಕಾದಂಬರಿ ಬರವಣಿಗೆಯಲ್ಲಿ ತೊಡಗಿಸಿಕೊಂಡೆ. ನನ್ನ ಮೊದಲ ಕಾದಂಬರಿ 'ಕಾಳಿಗಂಗಾ' 1996ರಲ್ಲಿ ಪ್ರಕಟವಾಗಿ, ತುಂಬಾ ಪ್ರಸಿದ್ಧವಾಯಿತು.

● **ಕೊಂಕಣಿಯಲ್ಲಿ ಬರವಣಿಗೆ ಪ್ರಾರಂಭಿಸಿದ ಬಳಿಕ ನೀವು ನಾಲ್ಕು ಕಥಾಸಂಗ್ರಹಗಳನ್ನು ಪ್ರಕಟಿಸಿದಿರಿ. ಆಮೇಲೆ ನಿಮ್ಮ ಕಾದಂಬರಿ ಬರವಣಿಗೆ ಪ್ರಾರಂಭವಾಯಿತು. ಮುಂದಿನ ಹತ್ತು ವರ್ಷಗಳಲ್ಲಿ ವೈವಿಧ್ಯಮಯ ವಸ್ತುವಿನ ಏಳು ಕಾದಂಬರಿಗಳು ಪ್ರಕಟವಾದವು. ಅವು ತುಂಬಾ ಜನಪ್ರಿಯವೂ ಆದವು. ಕಾದಂಬರಿಯ ವಿನ್ಯಾಸ ನಿಮಗೆ ಹೆಚ್ಚು ಸಹಕಾರಿಯಾಗಿರಬೇಕಲ್ಲ?**

ಸಣ್ಣಕಥೆ ಮತ್ತು ಕಾದಂಬರಿ ಇವೆರಡೂ ಮಹತ್ವಪೂರ್ಣ ಸಾಹಿತ್ಯ ಪ್ರಕಾರಗಳು. ಕಥೆ ಅಡಕ ಹಾಗೂ ಏಕಧಾಟಿಯ ತಂತ್ರಬದ್ಧ ರಚನೆ. ನಾನು ಯಾವಾಗಲೂ ಹೇಳುತ್ತಿರುತ್ತೇನೆ, ಕಥೆಯೇ ಕಾಡಿನ ಏಕಮಾತ್ರ ಸುಂದರ ಸಸ್ಯವೆಂದು. ಆದರೆ ಕಾದಂಬರಿಯೆಂದರೆ ಅದು ಒಂದು ಇಡೀ ಕಾಡು. ಅದರಲ್ಲಿ ಬರೆಯುವುದಕ್ಕೆ ನಮ್ಮ ಪ್ರತಿಭೆಯನ್ನು ಆಡಿಸುವುದಕ್ಕೆ ತುಂಬಾ ಅವಕಾಶಗಳು ಇರುತ್ತವೆ. ಹೀಗಾಗಿ ನನ್ನ ಅನುಭವಸಿದ್ಧ ಘಟನೆಗಳನ್ನು, ವ್ಯಕ್ತಿಗಳನ್ನು ಕಾದಂಬರಿಗಳಲ್ಲಿ ನಾನು ಸಾಕ್ಷಾತ್ಕರಿಸಿದ್ದೇನೆ. ಆದರೆ ಕಾದಂಬರಿ ಬರೆಯುವ ಪ್ರಕ್ರಿಯೆ ತುಂಬಾ ವಿಶಾಲ ಹಾಗೂ ಕಠಿಣ. ನಮಗೆ ಇಷ್ಟವಾಗುವ ವಿಷಯ ಸಿಗಬೇಕು, ಅದರ ಕುರಿತು ಅಧ್ಯಯನ ನಡೆಸಬೇಕು, ಆಮೇಲೆ ಅದು ಬರವಣಿಗೆಯಲ್ಲಿ ವ್ಯಕ್ತಗೊಳ್ಳಬೇಕು. ಒಂದೊಂದು ಕಾದಂಬರಿಗೆ ಕನಿಷ್ಠ ಎರಡು ಮೂರು ವರ್ಷಗಳು ಹಿಡಿಯುತ್ತವೆ. ನಾನು ಒಬ್ಬ ಪ್ರಕೃತಿಪ್ರೇಮಿ. ನನಗೆ ಪ್ರಕೃತಿಯನ್ನು ಸಾಹಿತ್ಯದಲ್ಲಿ ಕೊಂಡೊಯ್ಯಬೇಕಾದರೆ ಅದಕ್ಕೆ ಕಾದಂಬರಿಯನ್ನೇ ಬರೆಯಬೇಕಾಗುತ್ತದೆ. ಇದರಿಂದ ಮನುಷ್ಯನಿಗೂ ನ್ಯಾಯ ಒದಗಿಸಿದಂತೆ ಆಗುತ್ತದೆ. ಏನು ಹೇಳಬೇಕೆಂದು ಅನಿಸುವುದೋ ಅದನ್ನು